**ದಿಃ 01.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.**

**ಮುಖ್ಯ ವಿಚಾರಣೆಃ ಶ್ರೀ. ಕೆ.ಡಿ.ವಿ ವಕೀಲರಿಂದಃ ಅರ್ಜಿದಾರರ ಪರವಾಗಿಃ**

**6)** ಇ.ಸಿ.ಎ ನಂಬರಃ 4/2020 ರಲ್ಲಿಯ ಆದೇಶ ಪುಟಗಳ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಪಿ.ಬಿ.ಹೆಚ್ ವಕೀಲರಿಂದಃ ಎದುರುದಾರರ ಪರವಾಗಿಃ**

7) ನಾನು 10 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಈ ನ್ಯಾಯಾಲಯದಲ್ಲಿ ಇ.ಸಿ.ಎ ನಂಬರಃ 4/2020 ಈ ಪ್ರಕರಣವನ್ನು ದಾಖಲುಪಡಿಸಿದೆ ಎನ್ನುವ ವಿಷಯ ನನಗೆ ಗೊತ್ತಿತ್ತು ಅಂದರೆ ಸರಿ. ಕೋವಿಡ್-19 2019 ರಲ್ಲಿ ಬಂದಿತ್ತು, ಅದರೆ ಅದು 2020 ನೇ ಇಸ್ವಿಯಲ್ಲಿ ಬಂದಿಲ್ಲ ಅಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಮೊದಲಿಗೆ ನಿಯುಕ್ತಿಗೊಳಿಸಿದ ವಕೀಲರಿಗೆ ಪಾರ್ಸಿ ಹೊಡೆದ ಬಗ್ಗೆ ನಂತರದಲ್ಲಿ ಗೊತ್ತಾಗಿರುತ್ತದೆ, ಏಕೆಂದರೆ ಮೊದಲಿಗೆ ನಾನು ತುಂಬಾ ದಿವಸ ಪೋನ ಹಚ್ಚಿ ಕೇಳಿದರೂ ಸಹ ಅವರು ನನ್ನ ಪೋನ ತೆಗೆದು ಮಾತನಾಡಿರುವದಿಲ್ಲ.

8) 2020 ನೇ ಇಸ್ವಿಯಿಂದ 2025 ರವರೆಗೆ ಈ ಮೊದಲು ಈ ಪ್ರಕರಣದಲ್ಲಿ ನಿಯುಕ್ತಿಗೊಳಿಸಿದ ವಕೀಲರಿಗೆ ಪಾರ್ಸಿ ಹೊಡೆದ ಎನ್ನುವ ವಿಷಯ ನನ್ನ ತಮ್ಮ ಅವರ ಮನೆಗೆ 2025 ನೇ ಇಸ್ವಿಯಲ್ಲಿ ಕರೆದುಕೊಂಡು ಹೋದಾಗ ಸದರಿ ಮಾಹಿತಿಯು ನನಗೆ ಗೊತ್ತಾಗಿರುತ್ತದೆ. ನಾನು ಈ

ಪ್ರಕರಣದಲ್ಲಿ ಮೊದಲಿಗೆ ನಿಯುಕ್ತಿಗೊಳಿಸಿದ ವಕೀಲರಿಗೆ ಪಾರ್ಸಿ ಹೊಡೆದ ಬಗ್ಗೆ ನಾನು ವೈದ್ಯಕೀಯ ದಾಖಲಾತಿಗಳನ್ನು ಹಾಜರುಪಡಿಸಿರುವದಿಲ್ಲ. ನನ್ನ ವೈಯಕ್ತಿಕ ಮಾಹಿತಿಗೆ 2025 ರಲ್ಲಿ ಬಂದಿರುತ್ತದೆ. ನನಗೆ ಹುಷಾರಿಲ್ಲದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವದಿಲ್ಲ. ನಾನು ಈ ಪ್ರಕರಣವನ್ನು 820 ದಿವಸ ತಡವಾಗಿ ಸಲ್ಲಿಸಿದ್ದು, ಆ ಕುರಿತಾಗಿ ನ್ಯಾಯಾಲಯಕ್ಕೆ ವಕೀಲರು ಸರಿಯಾಗಿ ಹಾಜರಾಗಿ ಮಂಡಿಸದೇ ಇರುವದರಿಂದ ಈ ಪ್ರಕರಣವನ್ನು ವಜಾಗೊಳಿಸಲಾಗಿತ್ತು ಅಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಸಲ್ಲಿಸಿದ ನನ್ನ ಮುಖ್ಯ ವಿಚಾರಣೆಗಾಗಿ ಪ್ರಮಾಣ ಪತ್ರವನ್ನು ಬರೆಯಲು ವಕೀಲರಿಗೆ ನಾನೇ ಸ್ವತಃ ಮಾಹಿತಿ ಕೊಟ್ಟಿದ್ದೇನೆ. ನಾನು ಸಲ್ಲಿಸಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಕಾಣಿಸಿದ ಸಂಗತಿಗಳು ಸುಳ್ಳಾಗಿರುತ್ತವೆ ಅಂದರೆ ಸರಿಯಲ್ಲ, ನಾನು ಅವುಗಳನ್ನು ಪ್ರಕರಣಕ್ಕೆ ಪೂರಕವಾಗುವಂತೆ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಮೊದಲಿಗೆ ನಿಯುಕ್ತಿಗೊಳಿಸಿದ ಆರೋಗ್ಯದ ಸಂಬಂದವಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೇ ಇರುವದರಿಂದ ಈ ಪ್ರಕರಣವನ್ನು ಮರುಸ್ಥಾಪಿಸಲು ಯಾವುದೇ ಕಾರಣ ಉಂಟಾಗುವದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ, ಹಾವೇರಿ.